## About Us

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ I
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ II
II ಓಂ ಶಾಂತಿಃ ಶಾಂತಿಃ ಶಾಂತಿಃ II

# ಕಣ್ವಮಠದ ಪರಿಚಯ

1. ಪೀಠಿಕೆ
2. ಕಣ್ವಮಠದ ಸ್ಥಾಪನೆ.
3. ಮಠದ ಪರಂಪರೆ, ಧರ್ಮಪ್ರಚಾರ, ಅಭಿವೃದ್ಧಿ ಮತ್ತು ಸಂಘಟನೆ
4. ಕಣ್ವಮಠ ಹುಣಸಿಹೊಳೆ ಕ್ಷೇತ್ರ ಹಾಗೂ ಮಠದ ಇತರ ಕ್ಷೇತ್ರಗಳ ಸಂಕ್ಷಿಪ್ತ ಪರಿಚಯ ಹೆಚ್ಚಿನ ಮಾಹಿತಿಗೆ
5. **ಕಣ್ವಮಠದ ಯತಿಗಳ ಪರಂಪರೆ**

**ಪೀಠಿಕೆ :-** ಸನಾತನ ಧರ್ಮವಾದ ಹಿಂದೂ ಧರ್ಮವು ವೇದಾಧಾರದ ತತ್ವದ ಮೇಲೆ ಇರುವದೆಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ. ಶ್ರೀ ಮನ್ನಾರಾಯಯಣ ಸ್ವರೂಪವಾದ ಶ್ರೀ ವೇದವ್ಯಾಸರು ಕಲಿಯುಗದಲ್ಲಿನ ಜನರು ಇತರ ಯುಗದಲ್ಲಿಯ ಜನರಿಗಿಂತ ಅಲ್ಪಾಯುಗಳೂ, ಮಂದಮತಿಗಳಾಗಿರುತ್ತಾರೆ. ಹೀಗಾಗಿ ಕಲಿಯುಗದ ಜನರು ಕನಿಷ್ಟ ಪಕ್ಷಕ್ಕೆ

ಒಂದೊಂದು ವೇದಭಾಗವನ್ನಾದರೂ ಅಧ್ಯಯನ ಮಾಡಿಕೊಂಡು ಇರಲಿ ಎಂಬ ಲೋಕಕಲ್ಯಾಣದ ಉದ್ದೇಶದಿಂದ ವೇದರಾಶಿಯನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದರು. (1) ಋಗ್ವೇದ (2) ಯಜುರ್ವೇದ (3) ಸಾಮವೇದ (4) ಅಥರ್ವವೇದ ಹಾಗೂ ಈ ಪ್ರತಿಯೊಂದು ವೇದಕ್ಕೂ ಒಬ್ಬೊಬ್ಬ ಋಷಿಯನ್ನು ಪ್ರವರ್ತಕರನ್ನಾಗಿ ಮಾಡಿದರು. ಪೈಲರಿಗೆ ಋಗ್ವೇದವನ್ನೂ, ವೈಶಂಪಾಯನರಿಗೆ ಯಜುರ್ವೇದವನ್ನೂ, ಜೈಮಿನಿಗೆ ಸಾಮವೇದವನ್ನೂ, ಸುಮಂತುವಿಗೆ ಅಥರ್ವಣವೇದವನ್ನೂ ಉಪದೇಶಿಸಿದರು. ಈ ಶಿಷ್ಯರುಗಳೇ ಆಯಾ ವೇದಗಳಿಗೆ ಆದ್ಯ ಪ್ರವರ್ತಕರೆಂದು ತಿಳಿದು ಬರುತ್ತದೆ. ***(ವೇದಗಳು ಮತ್ತು ಅವುಗಳ ಶಾಖೆಗಳ ಸಂಕ್ಷಿಪ್ತ ಮಾಹಿತಿ:-*** *ಋಗ್ವೇದದಲ್ಲಿ 5 ಶಾಖೆಗಳಿವೆ. ಇವುಗಳಲ್ಲಿ ಶಾಕಲ ಶಾಖೆಯ ಬ್ರಾಹ್ಮಣರು ಮಾತ್ರ ಈಗ ಇದ್ದಾರೆ. ಈ ಶಾಕಲ ಶಾಖೆಯ ಬ್ರಾಹ್ಮಣರಲ್ಲಿ ಅದ್ವೈತ ಮತಾನುಯಾಯಿಗಳೂ ಇದ್ದಾರೆ, ದ್ವೈತ ಮತಾನುಯಾಯಿಗಳೂ ಇದ್ದಾರೆ, ವಿಶಿಷ್ಟಾದ್ವೈತ ಮತಾನುಯಾಯಿಗಳೂ ಇದ್ದಾರೆ. ಕೃಷ್ಣ ಯಜುರ್ವೇದದಲ್ಲಿ 86 ಶಾಖೆಗಳಿರುತ್ತವೆಂದು ಚರಣವ್ಯೂಹ ಗ್ರಂಥದಲ್ಲಿ ಸೂಕ್ತವಾಗಿರುತ್ತದೆ. ಈ 86 ಶಾಖೆಗಳಲ್ಲಿ (1) ತೈತ್ತಿರೀಯ (2) ಕಠ (3) ಮೈತ್ರಾಯಣಿ ಎಂಬ ಮೂರೇ ಶಾಖೆಗಳು ಮಾತ್ರ ಈಗ ಉಪಲಬ್ಧವಾಗಿವೆ. ತೈತ್ತಿರೀಯ ಶಾಖೆಯ ಬ್ರಾಹ್ಮಣರಲ್ಲಿ ಅದ್ವೈತ ಹಾಗೂ ದ್ವೈತ ಮತಾನುಯಾಯಿಗಳು ಇದ್ದಾರೆ. ಸಾಮವೇದದಲ್ಲಿ ಒಂದು ಸಾವಿರ (1000) ಶಾಖೆಗಳು ಇರುತ್ತವೆಂದು ಚರಣವ್ಯೂಹ ಗ್ರಂಥದಲ್ಲಿ ಉಕ್ತವಾಗಿದೆ. ಇವುಗಳಲ್ಲಿ (1) ರಾಣಾಯನೀಯ (2) ಕೌಥುವ ಇವೆರಡೇ ಶಾಖೆಗಳು ಮಾತ್ರ ಈಗ ಉಪಲಬ್ಧವಾಗಿವೆ. ಈ ರಾಣಾಯನೀಯ ಶಾಖೆಯ ಬ್ರಾಹ್ಮಣರು ಅದ್ವೈತ ಮತದಲ್ಲಿಯೂ ಹಾಗೂ ದ್ವೈತ ಮತದಲ್ಲಿಯೂ ಇದ್ದಾರೆ. ಅಥರ್ವವೇದದಲ್ಲಿ 9 ಶಾಖೆಗಳು ಇರುತ್ತವೆ. ಇವುಗಳಲ್ಲಿ (1) ಪಿಪ್ಪಲಾದ ಶಾಖೆ (2) ಶೌನಕೀಯ ಶಾಖೆ ಇವೆರಡೇ ಶಾಖೆಗಳು ಮಾತ್ರ ಈಗ ಉಪಲಬ್ಧವಾಗಿವೆ.)*

**"ಕರ್ಮ, ಉಪಾಸನೆ, ಜ್ಞಾನವೆಂಬ 3 ಪ್ರಕರಣಗಳೂ ಇರುವ ಆ ಆಯಾತಯಾಮ ಸಂಜ್ಞಕವಾದ ಶುಕ್ಲಯಜುರ್ವೇದವನ್ನು" ವೈಶಂಪಾಯನ ಋಷಿಗಳ ಶಿಷ್ಯರಾದ ಶ್ರೀ ಯಾಜ್ಞವಲ್ಕ್ಯರು ಭಗವಾನ್ ಸೂರ್ಯದೇವರನ್ನು ಕುರಿತು ತಪಸ್ಸನ್ನಾಚರಿಸಿ, ಭಗವಾನ್ ಸೂರ್ಯದೇವರಿಂದ ಶುಕ್ಲ ಯಜುರ್ವೇದವನ್ನು ಪಡೆದುಕೊಂಡರು ಮತ್ತು ಶ್ರೀ ಯಾಜ್ಞವಲ್ಕ್ಯರು ಶುಕ್ಲಯಜುರ್ವೇದದ ಶಾಖಾ ಪ್ರವರ್ತಕರಾದರು.** ಶ್ರೀ ಯಾಜ್ಞವಲ್ಕ್ಯರು ಶುಕ್ಲಯಜುರ್ವೇದವನ್ನು ತಮ್ಮ ಶಿಷ್ಯರಾದ ಕಣ್ವಋಷಿ, ಮಾಧ್ಯಾಂದಿನ ಋಷಿ ಮತ್ತು ಇನ್ನಿತರ 13 ಬ್ರಹ್ಮಚಾರಿಗಳಿಗೆ ಕಲಿಸಿದರು. ಇದೇ ಋಷಿಮುನಿಗಳ ಹೆಸರಲ್ಲಿ ಶುಕ್ಲಯಜುರ್ವೇದದಲ್ಲಿ ಕಾಣ್ವಶಾಖೆ, ಮಾಧ್ಯಾಂದಿನ ಶಾಖೆ ಹಾಗೂ ಇನ್ನಿತರ 13 ಶಾಖೆಗಳಾದವು. ಈ 15 ಶಾಖೆಗಳಲ್ಲಿ ಕಾಣ್ವಶಾಖೆ ಮತ್ತು ಮಾಧ್ಯಾಂದಿನ ಶಾಖೆ ಎಂಬ ಎರಡೂ ಶಾಖೆಗಳು ಇಂದಿಗೂ ಉಪಲಬ್ಧವಾಗಿವೆ. ಕಾಣ್ವ ಮತ್ತು ಮಾಧ್ಯಾಂದಿನ ಇವೆರಡೂ. ಶಾಖೆಗಳ ಬ್ರಾಹ್ಮಣರು ಕಾತ್ಯಾಯಿನಿ ಸೂತ್ರಾನುಯಾಯಿಗಳಾಗಿದ್ದಾರೆ. ಕಾಣ್ವಶಾಖೆಯ ಬ್ರಾಹ್ಮಣರಲ್ಲಿ ಅದ್ವೈತ ಮತಾನುಯಾಯಿಗಳೂ ಇದ್ದಾರೆ, ದ್ವೈತ ಮತಾನುಯಾಯಿಗಳೂ ಇದ್ದಾರೆ, ವಿಶಿಷ್ಟಾದ್ವೈತ ಮತಾನುಯಾಯಿಗಳೂ ಇದ್ದಾರೆ. ***(ವೇದಕಾಲದಿಂದ ಆಧುನಿಕ ಕಾಲದವರೆಗೆ ನಡೆದುಬಂದ ಶುಕ್ಲ ಯಜುರ್ವೇದೀಯರಲ್ಲಿಯ ದ್ವೈತ ಪರಂಪರೆಯ ಇತಿಹಾಸವು :-*** *ಮಾಧ್ಯಾಂದಿನ ಪಾಠದ ಬೃಹದಾರಣ್ಯಕೋಪನಿಷತ್ತಿನ 3 ನೇ ಅಧ್ಯಾಯದ ಏಳನೇ ಬ್ರಾಹ್ಮಣದ 22 ನೇ ಮಂತ್ರದಲ್ಲಿಯೂ ಹೇಳಲ್ಪಟ್ಟ* ***"ವಿಜ್ಞಾನಾದಂತರ ಇತಿ ಕಾಣ್ವಾಃ"*** *ಎಂಬ ಸೂತ್ರದ ಮೇಲಿಂದ ಜೀವನಿಂದ ಪರಮಾತ್ಮನು ಭಿನ್ನವಾಗಿದ್ದಾನೆಂದು ಕಣ್ವಶಾಖೆಯ ಬ್ರಾಹ್ಮಣರು ಪ್ರಾಚೀನ ಕಾಲದಿಂದಲೇ ಒಪ್ಪುತ್ತಿದ್ದರೆಂದೂ,* ***"ಆತ್ಮನೋಂತರ ಇತಿ ಮಾಧ್ಯಾಂದಿನಾಃ "*** *ಎಂದರೆ ಜೀವನದಿಂದ ಪರಮಾತ್ಮನು ಬೇರೆಯಾಗಿದ್ದಾನೆಂದು ಮಾಧ್ಯಾಂದಿನ ಶಾಖೆಯ ಬ್ರಾಹ್ಮಣರೂ ಒಪ್ಪುತ್ತಿದ್ದರೆಂದೂ ಈ ನಮ್ಮ ಉಪನಿಷತ್ ವಾಕ್ಯಗಳಿಂದ ಸಿದ್ಧವಾಗದೆ ಇರದು. ಇದಲ್ಲದೇ,* ***ಶ್ರೀ ವೇದವ್ಯಾಸರು ಸಹ ಬ್ರಹ್ಮಸೂತ್ರ ಭಾಷ್ಯದಲ್ಲಿ ಜೀವ ಪರಮಾತ್ಮ ಭೇದಗಳ ವಿಷಯವಾಗಿ ವರ್ಣನೆಯನ್ನು ಮಾಡುವಾಗ "ಓಂ ಶಾರೀರಶ್ಚೋಭಯೇಪಿಂಕಿ ಭೇದೇನೈನ ಮಧೀಯತೇ" ಎಂದು "ಕಣ್ವಮಾದ್ಧ್ಯಂದಿನ ಶೃತಿಗಳ" ಆಧಾರವನ್ನೇ ತಕ್ಕೊಂಡು ದ್ವೈತ ಸಿದ್ಧಾಂತವನ್ನು ಪ್ರಬೋಧಿಸಿರುವರು.*** *ಇದರ ಮೇಲಿಂದ ಶ್ರೀ ಯಾಜ್ಞವಲ್ಕ್ಯರ ಹಾಗೂ ವೇದವ್ಯಾಸರ ಕಾಲದಿಂದ ಅಂದರೆ ವೇದಕಾಲದಿಂದಲೇ ಶುಕ್ಲಯಜುಶ್ಯಾಖೆಯಲ್ಲಿಯ ಬ್ರಾಹ್ಮಣರನೇಕರು, ಜೀವ ಪರಮಾತ್ಮರಲ್ಲಿಯ ಬೇಧವನ್ನು ನಂಬುತ್ತ ದ್ವೈತ ಸಿದ್ಧಾಂತವನ್ನು ಆಚಾರಿಸುತ್ತಿದ್ದರೆಂದು, ಮೇಲಿನ*

*ಸೂತ್ರಗಳ ಆಧಾರದ ಮೇಲಿಂದ ಸ್ಪಷ್ಟವಾಗುವದು.)* ಶುಕ್ಲ ಯಜುರ್ವೇದೀಯ ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಮೂರೂ ಅನುಯಾಯಿಗಳೂ, ಶುಕ್ಲ ಯಜುರ್ವೇದದ ತತ್ವದ ಮೇಲೆ ಶುಕ್ಲ ಯಜುರ್ವೇದ ಮಂತ್ರಗಳನ್ನು ಪಠಿಸುತ್ತ, ಕಾತ್ಯಾಯಿನಿ ಸೂತ್ರದ ಪ್ರಕಾರವೇ ಎಲ್ಲರೂ ನಿತ್ಯ ಕಾರ್ಯಕ್ರಮ ಹಾಗೂ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳನ್ನು ವೇದಕಾಲದಿಂದಲೂ ಆಚರಿಸುತ್ತಾ ಬಂದಿದ್ದಾರೆ. ಮೂರೂ ಅನುಯಾಯಿಗಳಿಗೆ ಶುಕ್ಲ ಯಜುರ್ವೇದವೇ ಹಾಗೂ ಕಾತ್ಯಾಯಿನಿ ಸೂತ್ರವೇ ಮಹತ್ವವಾದದ್ದು ಎಂಬುದು ವಿಶೇಷವಾಗಿದೆ. ಮಾಧ್ಯಂದಿನ ಶಾಖೆಯ ಬ್ರಾಹ್ಮಣರು ಗುರ್ಜರ, ಮಹಾರಾಷ್ಟ್ರ, ಕರ್ನಾಟಕ, ಉತ್ತರ ಹಿಂದುಸ್ಥಾನದಲ್ಲಿಯೂ ಇದ್ದಾರೆ. ಕಾಣ್ವಶಾಖೀಯ ಬ್ರಾಹ್ಮಣರು ಗುರ್ಜರ, ಮಹಾರಾಷ್ಟ್ರ, ಕರ್ನಾಟಕ, ಅಂದ್ರ, ದ್ರಾವಿಡ ಈ ಪಂಚ ದ್ರಾವಿಡಗಳಲ್ಲಿ ಇದ್ದಾರೆ. ಕಾಲಾನುಸಾರವಾಗಿ ಆ ರಾಜ್ಯಗಳಲ್ಲಿರುವ ವಿದ್ವಾಂಸರು ಹಾಗೂ ಅನೇಕ ಆಶ್ರಮಗಳು ಶುಕ್ಲ ಯಜುರ್ವೇದ ತತ್ವಗಳನ್ನು ಸಮಾಜಕ್ಕೆ ಸಲ್ಲಿಸುತ್ತ, ಶುಕ್ಲ ಯಜುರ್ವೇದ ಪ್ರಚಾರ ಮಾಡುತ್ತಾ ಬಂದಿದ್ದಾರೆ.

**ಕಣ್ವಮಠ ಸ್ಥಾಪನೆ:-** ಶಾಲಿವಾಹನ ಶಕೆ 1718 (ಕ್ರಿ. ಶ. 1796) ನಳನಾಮ ಸಂವತ್ಸರವು ಕಣ್ವಶಾಖೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹುದು. ಯಾಕೆಂದರೆ ಈ ವರ್ಷವೇ ಕಣ್ವಶಾಖೆಯ ಸಮಾಜದಲ್ಲಿ ಶ್ರೀ ಯಾಜ್ಞವಲ್ಕ್ಯರ ಕೃಪೆಯಿಂದ ಶ್ರೀ ಶ್ರೀ 1008 ಶ್ರೀ ಮಾಧವತೀರ್ಥರ ದ್ವಾರಾ "ಕಣ್ವಮಠ" ಸ್ಥಾಪಿಸಲ್ಪಟ್ಟಿತು. ಶ್ರೀ ಮಾಧವತೀರ್ಥರ ಪೂರ್ವಾಶ್ರಮದ ಹೆಸರು "ಶ್ರೀ ವೆಂಕಟೇಶಾಚಾರ್ಯರು. ಇವರು. ಕರ್ನಾಟಕದ ರಾಯಚೂರು. ಜಿಲ್ಲೆಯ ದೇವದುರ್ಗದ ನಿವಾಸಿಗಳು ಹಾಗೂ ಶುಕ್ಲ ಯಜುರ್ವೇದಿಯ ಕಣ್ವಶಾಖಾ ದ್ವೈತ ಮತಾನುಯಾಯಿಗಳು. ಶಾ. ಶ. 17 ನೇ ಶತಮಾನದಲ್ಲಿ ಇವರು ಗುಲ್ಬರ್ಗಾ ಜಿಲ್ಲೆಯ ಸುರಪುರ ಎಂಬ ಪಟ್ಟಣದಲ್ಲಿ ವಾಸವಾಗಿದ್ದು ನಿತ್ಯ ಧಾರ್ಮಿಕ ಕೈಂಕರ್ಯಗಳನ್ನು ಪಾಲಿಸುತ್ತಾ, ತಮ್ಮ ಸಹೋದ್ಯೋಗಿಗಳಾದ ಕಣ್ವಶಾಖೀಯ ವಿದ್ವಾಂಸರೊಂದಿಗೆ ಸೇರಿಕೊಂಡು ಶುಕ್ಲ ಯಜುರ್ವೇದದ ತತ್ವಗಳನ್ನು ಕಾತ್ಯಾಯಿನಿ ಸೂತ್ರವನ್ನು ಪ್ರಚಾರ ಮಾಡುವುದರಲ್ಲಿ ತೊಡಗಿಸಿಕೊಂಡಿದ್ದರು. ಶ್ರೀ ವೆಂಕಟೇಶಾಚಾರ್ಯರ ಅಗಾಧವಾದ ಪಾಂಡಿತ್ಯ, ತತ್ವನಿಷ್ಠೆ, ವಾದವಿದುಷ್ಯ ಬಹಳೇ ಮೆಚ್ಚುವಂತಹುದು. ಇವರು ಸದಾಚಾರ ಸಂಪನ್ನರೂ, ಒಳ್ಳೆ ತೇಜಸ್ವಿಗಳೂ ಆಗಿದ್ದರು. ವೈದಿಕದ ಧರ್ಮದಲ್ಲಿಯೂ, ತಾರ್ಕಿಕದಲ್ಲಿಯೂ ಒಳ್ಳೆ ನಿರ್ಣಾತರು. ವೇದವಿಹಿತಾಚರಣೆಯಿಂದ ತಮ್ಮ ಮನೆತನದ ಪೂರ್ವಜರ ಪ್ರಖ್ಯಾತಿಯನ್ನು ಕಾಯ್ದುಕೊಂಡು ಬಂದಿದ್ದರು. ಅಲ್ಲದೇ ದಯಾಘನರೂ, ವಿರಕ್ತಶಿಖಾಮಣಿಗಳೂ ಆಗಿದ್ದು ಶಾಂತಿಯೇ ಮೂರ್ತಿವೆತ್ತಂತಿದ್ದರು. ದಿನಾಲು ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ತಮ್ಮ ನಿತ್ಯ ಸ್ನಾನ ಸಂಧ್ಯಾದಿ ಕರ್ಮಗಳನ್ನು ಪೂರೈಸಿದ ಮೇಲೆ ಯಾವಾಗಲೂ ಶ್ರೀ ಆದಿಶೇಷನ ಉಪಾಸನೆಯಲ್ಲಿಯೇ ಕಾಲ ಕಳೆಯುತ್ತಾ ಆತನ ಪರಮಾನುಗ್ರಹಕ್ಕೆ ಪಾತ್ರರಾಗಿದ್ದರು. ಗ್ರಂಥಾವಲೋಕನ, ಪುರಾಣ, ಪ್ರವಚನ, ಕಣ್ವಸಮಾಜದ ವೈದಿಕ ಶಿಕ್ಷಣದ ಚಿಂತನೆಯಲ್ಲೇ ಆಯುಷ್ಯವನ್ನು ಕಳೆದವರು. ಆಗಿನ ಸಮಯದಲ್ಲಿ ಇರುವಂಥ ಬ್ರಾಹ್ಮಣ ಮಠಗಳ ಜೊತೆಗೂಡಿಕೊಂಡು ಕಣ್ವಸಮಾಜದ ಧಾರ್ಮಿಕ ಹಾಗೂ ವೈದಿಕ ಶಿಕ್ಷಣದ ಅಭಿವೃದ್ಧಿ ಗೋಸ್ಕರ ಪ್ರಯತ್ನ ಪಟ್ಟರೂ ಅವರ ಅನಿಸಿಕೆ ಪ್ರಕಾರ ಅಭಿವೃದ್ಧಿ ಸಿಕ್ಕಿರಲಿಲ್ಲ. ಆದಾಗ್ಯೂ ಅವರು ತಮ್ಮೊಂದಿಗಿರುವಂಥ ಕಣ್ವಸಮಾಜದ ವಿದ್ವಾಂಸರೊಂದಿಗೆ ಸೇರಿಕೊಂಡು ಕಣ್ವಸಮಾಜದ ಧಾರ್ಮಿಕ ಅಭಿವೃದ್ಧಿಗೋಸ್ಕರ ಸತತ ಪ್ರಯತ್ನ ಮಾಡುತ್ತಲೇ ಇದ್ದರು.

ಹೀಗೆಯೇ ಜೀವನ ನಡೆದಿರಲು ಒಮ್ಮೆ ಅಘಟಿತ ಘಟನೆ ನಡೆಯಿತು. ಒಂದು ದಿವಸ ಆದಿಶೇಷನು ವೆಂಕಟೇಶಾಚಾರ್ಯರಿಗೆ ಸ್ವಪ್ನದಲ್ಲಿ ದರ್ಶನವಿತ್ತು ಹೀಗೆ ಅಪ್ಪಣೆ ಮಾಡಿದನು:- **"ಹೇ ಆಚಾರ್ಯ ಶ್ರೇಷ್ಠನೇ, ಇನ್ನು ಕೆಲವೇ ದಿನಗಳಲ್ಲಿ ನಿನಗೆ ವಾಯ್ವಂಶ ಸಂಭೂತರಾದ ಮಹಾ ತಪಸ್ವಿಗಳ ದರ್ಶನವಾಗುವುದು. ಅವರಿಂದ ನೀನು ಈ ಜನ್ಮವನ್ನು ಬಿಟ್ಟು ಬೇರೊಂದು ಜನ್ಮವನ್ನು ಹೊಂದುವಿ. ಅವರು ನಿನಗೆ ವಾಯುದೇವರು ಪ್ರಸಾರ ಮಾಡಿದ ವಿಷ್ಣು ಸರ್ವೋತ್ತಮತ್ವದ ಪ್ರಸಾರ ಕಾರ್ಯವನ್ನು ವಹಿಸಿಕೊಡುವರು. ಅದನ್ನು ನೀನು ನಿರ್ವಹಿಸಿ ಪ್ರೇಮ ಪದವನ್ನು ಹೊಂದು."** ಈ ವಿಷಯವನ್ನು ವೆಂಕಟೇಶಾಚಾರ್ಯರು ತಮ್ಮ ಸಮಾಜ ಬಂಧುಗಳಿಗೆ ತಿಳಿಸುತ್ತಾರೆ. ಮುಂದೆ ಕೆಲವೇ ದಿನಗಳಲ್ಲಿ ಉಡುಪಿಯ ಅಷ್ಟಮಠದಲ್ಲೊಂದಾದ ಶಿರೂರು ಮಠದ ಇಪ್ಪತ್ತು ಮೂರನೇ (23 ನೇ) ಶ್ರೀಪಾದಂಗಳವರಾದ ಶ್ರೀ ಶ್ರೀ 1008 ಶ್ರೀ ಲಕ್ಷ್ಮೀ ಮನೋಹರತೀರ್ಥ ಶ್ರೀಪಾದಂಗಳವರು ತಮ್ಮ ಸಂಚಾರ ಕಾರ್ಯಕ್ರಮದಂತೆ ತಾಳಿಕೋಟೆ (ಜಿಲ್ಲಾ: ಬಿಜಾಪುರ) ಮುಖಾಂತರ ಸುರಪುರಕ್ಕೆ ಆಗಮಿಸುವರು. ಶ್ರೀ ವೆಂಕಟೇಶಾಚಾರ್ಯರು ಪ್ರಮುಖವಾಗಿರುವಂಥ ಸುರಪುರದ ಬ್ರಾಹ್ಮಣ ಸಮಾಜವು ಸಕಲ ಮರ್ಯಾದೆಗಳೊಂದಿಗೆ ಶ್ರೀಪಾದಂಗಳವರನ್ನು ವೈಭವದಿಂದ ಸ್ವಾಗತ ಮಾಡಿ, ಮನಃಪೂರ್ವಕ ಸೇವೆ ಮಾಡಿ

ಶ್ರೀಗಳವರಲ್ಲಿ ಅತುಲ ಭಕ್ತ್ಯಾದರಗಳನ್ನು ತೋರಿಸಿದರು. ಅಭೂತವಾದ ಗುರುಸೇವೆಯನ್ನು ಕಂಡ ಶ್ರೀಪಾದಂಗಳವರು ಪ್ರೇಮ ಸಂತೋಷಗೊಂಡು ಇಲ್ಲಿನ ಶಿಷ್ಯ ವೃಂದಕ್ಕೆ ವಿಶೇಷವಾದ ಅನುಗ್ರಹ ಮಾಡಲು ಇಚ್ಛಿಸಿದರು. ಹೀಗೆಯೇ ಯೋಚಿಸುತ್ತ ಅಂದು ರಾತ್ರಿ ಮಲಗಿರಲು ಶ್ರೀಪಾದಂಗಳವರಿಗೆ ಒಂದು ಸ್ವಪ್ನ ದೃಷ್ಟಾಂತವಾಯಿತು. ಭಗವತ್ಸಂಕಲ್ಪವೇ ಬೇರೆ ! **ಶ್ರೀಮನ್ನಾರಾಯಣನು ಸ್ವಪ್ನದರ್ಶನವಿತ್ತು ಶ್ರೀ ಲಕ್ಷ್ಮೀ ಮನೋಹರತೀರ್ಥ ಶ್ರೀಪಾದಂಗಳವರಿಗೆ ಹೀಗೆ ಆಜ್ಞಾಪಿಸಿದನು. ''ಯತಿಶ್ರೇಷ್ಠನೇ, ನಾಳೆ ನನ್ನ ಭಕ್ತನಾದ ಆದಿಶೇಷನ ಪರಮಾನುಗ್ರಹಕ್ಕೆ ಪಾತ್ರನಾದ ಮತ್ತು ಒಳ್ಳೇ ಪ್ರತಿಭಾವಂತನೂ ಆದ ನನ್ನ ಭಕ್ತನೋರ್ವನು ನಿನ್ನ ಬಳಿಗೆ ಬರುವನು. ಅವನಿಗೆ ನಿನ್ನ ಮೂಲಸ್ಥಾನದಲ್ಲಿ ಆಶ್ರಯ ಕೊಟ್ಟು ಅನುಗ್ರಹ ಮಾಡು. ಅವನು ವಾಯುದೇವರು ಪ್ರಸಾರ ಮಾಡಿದ ತತ್ವಗಳನ್ನು ಪ್ರಸಾರ ಮಾಡಲು ಅತ್ಯಂತ ಸಮರ್ಥನೆಯೂ ಆಗಿರುವನು. ಅವನಿಂದ ಲೋಕದಲ್ಲಿ ನಿನ್ನ ಕೀರ್ತಿಯೂ ಹೆಚ್ಚುವುದು. ಇದಕ್ಕೆ ನೀನು ವಿಮುಖನಾಗಬೇಡ.''** ಕೂಡಲೇ ಶ್ರೀಗಳಿಗೆ ಎಚ್ಚರವಾಗಿ ಸ್ವಪ್ನದರ್ಶನವಿತ್ತುದನ್ನು ನೆನೆದು ಆನಂದಪುಲಕಿತರಾದರು ಹಾಗೂ ಆಶ್ಚರ್ಯವೂ ಆಯಿತು. ಶ್ರೀಪಾದಂಗಳವರು ಬೆಳಗಿನ ಜಾವದಲ್ಲಿ ಎದ್ದು ತಮ್ಮ ಪ್ರಾತರಹ್ನಿಕಗಳನ್ನು ತೀರಿಸಿಕೊಂಡು ಸುರಪುರದ ಭಕ್ತವೃಂದದವರನ್ನು ಕರೆಯಿಸಿ ಅವರು ಭಕ್ತ್ಯಾತಿಶಯದಿಂದ ಮಾಡಿದ ಗುರುಸೇವೆಯನ್ನು ಪ್ರಶಂಶಿಸಿ ತಮಗಾದ ಸ್ವಪ್ನದೃಷ್ಟಾಂತವನ್ನು ತಿಳಿಸಿದರು. ಇತ್ತ ಶ್ರೀ ವೆಂಕಟೇಶಾಚಾರ್ಯರು ತಮಗಾದ ಸ್ವಪ್ನದೃಷ್ಟಾಂತದ ಮೇರೆಗೆ ತಮಗೆ ನಿಜವಾದ ಮಾರ್ಗದರ್ಶಕ ಗುರುಗಳು ಇವರೇ ಎಂದೂ, ಅಂತೆಯೇ ಭಗವಂತನು ಇವರಿಗೂ ಹೀಗೆ ಪ್ರೇರಣೆ ಮಾಡಿರುವನೆಂದು ಭಾವಿಸಿ ತಮಗೂ ಕೆಲವು ದಿನಗಳ ಹಿಂದೆ ಆಗಿದ್ದ ಸ್ವಪ್ನದೃಷ್ಟಾಂತವನ್ನು ಶ್ರೀ ಶ್ರೀ 1008 ಶ್ರೀ ಲಕ್ಷ್ಮೀ ಮನೋಹರತೀರ್ಥ ಶ್ರೀಪಾದಂಗಳವರಿಗೆ ವೆಂಕಟೇಶಾಚಾರ್ಯರು ವಿವರಿಸಿದರು. ಆಗ ಶ್ರೀಪಾದಂಗಳವರು ತಮಗೆ ಸ್ವಪ್ನದ ಮೂಲಕ ಆದ ಭಗವದಾಜ್ಞೆಯ ಮೇರೆಗೆ ವೆಂಕಟೇಶಾಚಾರ್ಯರೇ ಆ ವ್ಯಕ್ತಿ. ಇದರಲ್ಲಿ ಸಂದೇಹವೇ ಇಲ್ಲ. ವೆಂಕಟೇಶಾಚಾರ್ಯರ ದಿವ್ಯ ತೇಜಸ್ಸನ್ನೂ, ವಿಷ್ಣುಭಕ್ತಿಯಿಂದ ಪರಿಪಕ್ವವಾಗಿರುವ ಅವರ ಮನಸ್ಸನ್ನೂ ಕಂಡು ತಮ್ಮ ಧರ್ಮ ಪ್ರಸಾರದ ಬೀಜಾರೋಹಣಕ್ಕೆ ಇವರ ಮನೋಕ್ಷೇತ್ರವು ಯೋಗ್ಯವಾಗಿರುವದೆಂದು ನಿಶ್ಚಯಿಸಿ ಶ್ರೀ ವೆಂಕಟೇಶಾಚಾರ್ಯರಿಗೆ ಸನ್ಯಾಸಾಶ್ರಮ ಕೊಡುವದಾಗಿ ತಿಳಿಸಿದರು ಮತ್ತು ಈ ಮಹತ್ವದ ಕಾರ್ಯವನ್ನು ಜರುಗಿಸಲು ಶ್ರೀ ಕೃಷ್ಣನ ಸನ್ನಿಧಿಯೇ ಯೋಗ್ಯವೆಂದೂ, ಇಲ್ಲಿಯ ಎಲ್ಲಾ ಭಕ್ತವೃಂದವೂ ಉಡುಪಿ ಕ್ಷೇತ್ರಕ್ಕೆ ಆಗಮಿಸಿ ಈ ಶುಭಕಾರ್ಯವನ್ನು ಪೂರೈಸಿಕೊಂಡು ಬರಬೇಕೆಂದೂ ಅಪ್ಪಣೆ ಮಾಡಿದರು.

ಶ್ರೀ ಲಕ್ಷ್ಮೀ ಮನೋಹರ ತೀರ್ಥ ಶ್ರೀಪಾದಂಗಳವರಿಂದ ಆಜ್ಞಪ್ತರಾದ ವೇ. ಮೂ. ವೆಂಕಟೇಶಾಚಾರ್ಯರು ತಮ್ಮ ಪ್ರಮುಖ ಕಣ್ವವಿಪ್ರ ಪರಿವಾರದೊಂದಿಗೆ ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಲು ಶ್ರೀ ಕೃಷ್ಣನ ಸನ್ನಿಧಾನವಾದ ಉಡುಪಿ **ಕ್ಷೇತ್ರಕ್ಕೆ ಪ್ರಯಾಣ ಮಾಡಿದರು. ಶ್ರೀ ಲಕ್ಷ್ಮೀ ಮನೋಹರತೀರ್ಥ ಶ್ರೀಪಾದಂಗಳವರು ಉಡುಪಿಯಲ್ಲಿ ಸಭೆಯೊಂದನ್ನು ಕರೆದು, ಸುರಪುರದಲ್ಲಿ ತಮಗಾದ ಸ್ವಪ್ನದೃಷ್ಟಾಂತವನ್ನೂ, ಸುರಪುರದ ಬ್ರಾಹ್ಮಣ ಸಮುದಾಯವು ಉಡುಪಿಗೆ ಆಗಮಿಸಿದ ವಿದ್ಯಮಾನವನ್ನೂ ಹಾಗೂ ಶ್ರೀ ವೆಂಕಟೇಶಾಚಾರ್ಯರಿಗೆ ಸಂನ್ಯಾಸ ದೀಕ್ಷಾ ಕೊಡುವ ವಿಚಾರವನ್ನೂ ಸಭೆಯಲ್ಲಿ ಉಪಸ್ಥಿತರಿದ್ದ ಉಡುಪಿಯ ಅಷ್ಟ ಮಠಗಳ ಯತಿವರ್ಯರಿಗೆ ನಿವೇದಿಸಿದರು ಮತ್ತು ತೇಜೋಮೂರ್ತಿಗಳೂ, ಆದಿಶೇಷನ ಉಪಾಸನೆ ಮಾಡಿ ಅವನ ಅನುಗ್ರಹವನ್ನು ಸಂಪಾದಿಸಿದವರೂ ಆದ ಸುರಪುರದ ಶ್ರೀ ವೆಂಕಟೇಶಾಚಾರ್ಯರನ್ನು, ಸಭೆಯಲ್ಲಿ ವಿರಾಜಮಾನವಾಗಿದ್ದ ಅಷ್ಟಮಠಗಳ ಯತಿವರೇಣ್ಯರಿಗೆ ಪರಿಚಯಿಸಿದರು. ಸ್ವಪ್ನದೃಷ್ಟಾಂತವನ್ನು ಕೇಳಿ ಅತೀವ ಆನಂದಾಶ್ಚರ್ಯವಾದ ಎಲ್ಲಾ ಯತಿಶ್ರೇಷ್ಠರೂ " ಎಲ್ಲವೂ ಶ್ರೀ ಹರಿಯ ಇಚ್ಛೆ ಅಲ್ಲವೇ! " ಆ ಭಗವಂತನ ಇಚ್ಛೆಯಂತೆ ಎಲ್ಲಾ ಕಾರ್ಯಗಳು ನಡೆಯಲಿ ಎಂದು ಹೇಳಿ ಶ್ರೀ ವೆಂಕಟೇಶಾಚಾರ್ಯರಿಗೆ ಸಂನ್ಯಾಸ ದೀಕ್ಷೆಯನ್ನು ಕೊಡುವ ಶುಭದಿನವನ್ನೂ ಗೊತ್ತು ಮಾಡಿದರು ಮತ್ತು ಈ ಭಾವೀ ನೂತನ ಯತಿಗಳು **ಮಹಾಜ್ಞಾನಿಗಳೂ, ಮಹಾತಪೋಧನರೂ ಆದ ಶ್ರೀ ಕಣ್ವಮಹರ್ಷಿಗಳ ಪರಂಪರೆಯಲ್ಲಿ ಬಂದವರಾದ್ದರಿಂದ ಈ ಗುರುಪರಂಪರೆಯನ್ನು ಅಂಥ ಮಹರ್ಷಿಗಳ ಹೆಸರಿನಿಂದಲೇ ಕರೆಯುವುದು ಯಥೋಚಿತವಾಗಿದೆ. ಆ ಜ್ಞಾನಿಗಳ ಹೆಸರಿನಿಂದಲೇ ''ಮಠವು'' ಲೋಕದಲ್ಲಿ ಪ್ರಸಿದ್ಧಿಯನ್ನು ಪಡೆಯಲಿ. ಆದ್ದರಿಂದ ಮಠಕ್ಕೆ ''ಕಣ್ವಮಠ'' ಎಂಬುದಾಗಿ ಹೆಸರಿಸುವುದು ಅತ್ಯಂತ ಯೋಗ್ಯವಾಗಿದೆ ಎಂದು ನಿಷ್ಕರ್ಷಿಸಲ್ಪಟ್ಟಿತು.** ಶ್ರೀಗಳ ಆಜ್ಞಾನುಸಾರ ವೆಂಕಟೇಶಾಚಾರ್ಯರು, ತಮ್ಮ ಸಂನ್ಯಾಸದೀಕ್ಷಾ ಪೂರ್ವದಲ್ಲಿ ನಡೆಯಬೇಕಾದ ಎಲ್ಲ ಕರ್ಮಾದಿಗಳನ್ನು ವಿಧಿವತ್ತಾಗಿ ಪೂರೈಸಿದರು. ಅನೇಕ ಮಂದಿ ಪಂಡಿತೋತ್ತಮರೂ, ಭಾಗವತೋತ್ತಮರೂ, ವೇದವೇತ್ತರೂ, ಲೌಕಿಕ ಶ್ರೇಷ್ಠರೂ, ಉಡುಪಿಯ ಅಷ್ಟ ಮಠಗಳ ಯತಿವರೇಣ್ಯರೂ, ಶ್ರೀ ಲಕ್ಷ್ಮೀ ಮನೋಹರ ತೀರ್ಥರೂ ನೆರೆಯಿಸಿದ ಸಭೆಯಲ್ಲಿ ಬಂದು ಕೂಡಿದರು. ಭಗವತ್ಸಂಕಲ್ಪವನುಗುಣವಾಗಿ ಪೂರ್ವಯೋಜಿತ ಕಾರ್ಯಕ್ರಮದಂತೆ **ಶ್ರೀ ಲಕ್ಷ್ಮೀ ಮನೋಹರತೀರ್ಥ ಶ್ರೀಪಾದಂಗಳವರು ಶಾ. ಶ. 1718 (ಕ್ರಿ. ಶ. 1796) ನಳನಾಮ ಸಂವತ್ಸರ ಮಾಘ ಶುದ್ಧ**

**ಪಂಚಮಿಯ, ಶ್ರೀ ಕಣ್ವಮಹರ್ಷಿಗಳ ಜಯಂತಿಯ ದಿನದ ಶುಭ ಮುಹೂರ್ತದಲ್ಲಿ ಶ್ರೀ ವೆಂಕಟೇಶಾಚಾರ್ಯರಿಗೆ ವಿಧ್ಯುಕ್ತವಾಗಿ ಸಂನ್ಯಾಸ ದೀಕ್ಷೆಯನ್ನಿತ್ತು " ಮಾಧವ ತೀರ್ಥ" ರೆಂಬ ನಾಮಾಭಿಧಾನದಿಂದ ವೇದಾಂತ ಸಾಮ್ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿ ಶ್ರೀಮದಾನಂದತೀರ್ಥ ಭಗವತ್ಪಾದರಿಂದ ಪರಂಪರಾಗತವಾಗಿ ಉಪದೇಶಿಸಿಸಲ್ಪಟ್ಟ ಮೂಲಮಂತ್ರೋಪದೇಶ ಮಾಡಿ ಉಪಾಸನಾರ್ಥವಾಗಿ ಶ್ರೀಮದಾನಂದತೀರ್ಥ ಕರಾರ್ಚಿತ ತಾಂಡವ ಶ್ರೀ ವಿಠ್ಠಲಕೃಷ್ಣನ ಮೂರ್ತಿಯನ್ನೂ, ಅಲಂಕಾರಾರ್ಥವಾಗಿ ರುಕ್ಮಿಣಿ ಸತ್ಯಭಾಮಾ ಸಮೇತ ಶ್ರೀ ವೇಣುಗೋಪಾಲಕೃಷ್ಣನ ಪ್ರತಿಮೆಯನ್ನೂ, ಶ್ರೀ ಮುದ್ರೆ, ಬಲಮುರಿ ಶಂಖ ಇವೆಲ್ಲವುಗಳನ್ನು ದಯಪಾಲಿಸಿದರು ಮತ್ತು ಎಲ್ಲ ಮಠಾಧೀಶರೂ ಶ್ರೀ ಮಾಧವ ತೀರ್ಥರನ್ನು ವಿಶೇಷವಾಗಿ ಆಶೀರ್ವದಿಸಿ, ಶ್ರೀ ಕಣ್ವಮಠ ಪರಂಪರೆಯು ಅತ್ಯಂತ ಪ್ರಖ್ಯಾತಿಯನ್ನು ಹೊಂದಲಿ ಎಂದು ಶುಭಾಶೀರ್ವಾದ ಮಾಡಿದರು.**

ಶ್ರೀ ಮನ್ಮಾಧವತೀರ್ಥರು ಭಕ್ತಿಪುರಸ್ಸರವಾಗಿ ಶ್ರೀ ಲಕ್ಷ್ಮೀ ಮನೋಹರತೀರ್ಥ ಶ್ರೀಪಾದಂಗಳವರ ಚರಣಾರವಿಂದಗಳಲ್ಲಿ ತಮ್ಮ ಅನಂತಾನಂತ ಪ್ರಮಾಣಗಳನ್ನು ಸಮರ್ಪಿಸಿದರು. ನಂತರ ಶ್ರೀ ಮಾಧವತೀರ್ಥರು ಅಲ್ಲಿಯೇ ಕೆಲವು ದಿನಗಳ ಕಾಲ ಕಳೆದು, ಮುಂದಿನ ಭಗವತ್ಸೇವಾ ಕಾರ್ಯವು ಬಹಳವಿದ್ದುದರಿಂದ ಗುರುಗಳ ಅಪ್ಪಣೆ ಪಡೆದು, ಎಲ್ಲ ಅಷ್ಟ ಮಠಗಳ ಯತಿವರ್ಯರ ಆಶೀರ್ವಾದ ಪಡೆದು ತಮ್ಮ ಪರಿವಾರದೊಂದಿಗೆ ಸಕಲ ವೈಭವದಿಂದ ಸುರಪುರಕ್ಕೆ ಪ್ರಯಾಣ ಬೆಳೆಸಿದರು.

**ಮಠದ ಪರಂಪರೆ, ಧರ್ಮಪ್ರಚಾರ, ಅಭಿವೃದ್ಧಿ ಮತ್ತು ಸಂಘಟನೆ:–** ಸುರಪುರದ ಬ್ರಹ್ಮವೃಂದವು ಅಮಿತೋತ್ಸಾಹದಿಂದ ಅತ್ಯಂತ ವೈಭವೋಪೇತರಾಗಿ ಶ್ರೀಮನ್ಮಾಧವತೀರ್ಥರನ್ನು ಸ್ವಾಗತ ಮಾಡಿತು. ನಿತ್ಯವೂ ಶ್ರೀ ವಿಠಲ ಕೃಷ್ಣನ ಪೂಜೆ, ಪಾಠ, ಪ್ರವಚನಾದಿಗಳು ನಡೆದವು. ಅನೇಕ ಜನರು ಇವರ ಪ್ರಭಾವಕ್ಕೆ ಮನಸೋತು ಇವರ ಶಿಷ್ಯತ್ವವನ್ನು ವಹಿಸಿ ಕಣ್ವಮಠದ ಶಿಷ್ಯರಾದರು. **"ಸುರಪುರದ ರಾಜಾ ಇಮ್ಮಡಿ ವೆಂಕಪ್ಪನಾಯಕನಂತೂ"** ಶ್ರೀ ಮಾಧವ ತೀರ್ಥರ ಆಗಮನದಿಂದ ತನ್ನ ಸಂಸ್ಥಾನವೇ ಪಾವನವಾಯ್ತು ಎಂದು ಭಾವಿಸಿ ಶ್ರೀಗಳವರಿಗೆ ಬಹಳೇ ಮರ್ಯಾದೆ ಮಾಡಿದರು. ಭಕ್ತಿಪುರಸ್ಸರವಾಗಿ ಶ್ರೀಪಾದಂಗಳವರ ಪಾದಪೂಜೆ ಸಮಾರಂಭವನ್ನು ಒಳ್ಳೆ ವೈಭವದಿಂದ ಜರುಗಿಸಿದರು. **ಇದೇ ಸಮಯಕ್ಕೆ "ರಾಮಾಪುರ" ಎಂಬ ಗ್ರಾಮವನ್ನು ದಾನಪತ್ರ ಬರೆದು ಶ್ರೀಗಳವರಿಗೆ ಸಮರ್ಪಿಸಿದರು. ಅದಕ್ಕೆ ಪ್ರತಿಯಾಗಿ ಶ್ರೀ ಮಾಧವತೀರ್ಥರು "ರಾಜನೇ, ನಾವು ಸಂನ್ಯಾಸಿಗಳು. ಇದಾವುದೂ ನಮಗೆ ಬೇಕಿಲ್ಲ. ಜಗತ್ಕಲ್ಯಾಣ ಕಾರಣನಾದ ಶ್ರೀ ವಿಠ್ಠಲಕೃಷ್ಣ ದೇವರು ನಿನ್ನ ರಾಜ್ಯದಲ್ಲಿ ಜಗದೋದ್ಧಾರಕ್ಕಾಗಿ ಬಂದು ನೆಲೆಸಿರುವನು. ಈತನ ದರ್ಶನಕ್ಕಾಗಿ ಕಣ್ವಮಠಕ್ಕೆ ಭಗವದ್ಭಕ್ತರು ಆಗಮಿಸುವರು. ಇಂಥ ಭಕ್ತರ ಆತಿಥ್ಯದಲ್ಲಿ ನೀನು ವೆಚ್ಚಮಾಡುವವನಾಗು. ಅಂದರೆ ನಿನ್ನ ಕಲ್ಯಾಣವಾಗುವದು." ನಾವು ಸಂನ್ಯಾಸಿಗಳು, ನಮಗೆ ಈ ದಾನದ ಭಾರವನ್ನು ವಹಿಸಬೇಡಿ. ಈ ದಾನಪತ್ರವನ್ನು ಮರಳಿ ತೆಗೆದುಕೊಳ್ಳಬೇಕು.** ಕೃಷ್ಣವೇಣಿಯು ಉತ್ತರವಾಹಿನಿಯಾಗಿ ಹರಿದ, ತಿಂತಣಿಯ ಆಚೆ ದಡದಲ್ಲಿರುವ ಪವಿತ್ರವಾದ ವೀರಘಟ್ಟದಲ್ಲಿ ಕಣ್ವಮಠವನ್ನು ನಿರ್ಮಿಸಬೇಕೆಂದಿದ್ದೇವೆ. ಅದಕ್ಕೆ ಬೇಕಾಗುವ ವ್ಯವಸ್ಥೆಮಾಡಬೇಕೆಂದು ಆಜ್ಞಾಪಿಸುತ್ತೇವೆ. ವೆಂಕಟಪ್ಪನಾಯಕರು ಶ್ರೀಗಳನ್ನು ವಿನಂತಿ ಪೂರ್ವಕವಾಗಿ ಕೇಳಿಕೊಳ್ಳುತ್ತಾರೆ. ಮಾನ್ಯ ಶ್ರೀಗಳೇ ! ತಮ್ಮ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುತ್ತೇವೆ. ತಮ್ಮನ್ನು ರಾಜಯತಿಗಳೆಂದು ನಮ್ರವಾಗಿ ಒಪ್ಪಿಕೊಂಡು ತಮ್ಮ ನಿತ್ಯ ನೈಮಿತ್ತಿಕ ಕಾರ್ಯಗಳು ಸಾಂಗವಾಗಿ ನಡೆಯುವಂತೆ ನೋಡಿಕೊಳ್ಳುತ್ತೇವೆ. ವೀರಘಟ್ಟ (ವೀರಘಟ್ಟವನ್ನು ವೀರಗೊಟ್ಟ ಮತ್ತು ವೀರಗೋಟ ಮತ್ತು ಇರಗೋಟ ಎಂತಲೂ ಕೆರೆಯೂತ್ತಾರೆ )ದಲ್ಲಿ ವೇದಘೋಷ ಅನವರತ ಮಾರ್ದನಿಗೊಳ್ಳಲೆಂದು ಶ್ರೀ ವೇಣುಗೋಪಾಲಸ್ವಾಮಿಯಲ್ಲಿ ಪ್ರಾರ್ಥಿಸುತ್ತೇವೆ. ರಾಜನು ಭಕ್ತ್ಯಾತಿಶಯದಿಂದ ಗುರ್ವಾಜ್ಞೆಯನ್ನು ಶಿರಸಾವಹಿಸಿ ತನು, ಮನ, ಧನಗಳಿಂದ ಕಣ್ವಮಠದ ಸೇವೆಯನ್ನು ಮಾಡತೊಡಗಿದನು.

ಹೀಗೆ ರಾಜಾಶ್ರಯ ಪಡೆದ ಶ್ರೀ ಮಾಧವತೀರ್ಥಯತಿವರ್ಯರು ತಮ್ಮ ಆಯುಷ್ಯದ ಹಾಗೂ ಮಠ ಸ್ಥಾಪನೆಯ ಧ್ಯೇಯವಾಗಿದ್ದ ಧರ್ಮ ಪ್ರಚಾರ ಕಾರ್ಯ ಹಾಗೂ ಶುಕ್ಲಯಜುರ್ವೇದಿಯರ ಸಂಘಟನೆ ಕಾರ್ಯದಲ್ಲಿ ತಲ್ಲೀನರಾಗುತ್ತ ಕಣ್ವಮಠದ ಪರಿವಾರದೊಂದಿಗೆ ದೇಶ ಸಂಚಾರಕ್ಕೆ ಹೊರಟರು. ದಾರಿಮಧ್ಯದಲ್ಲಿ ತೀರ್ಥಕ್ಷೇತ್ರಗಳಲ್ಲಿ ಸ್ನಾನ ವಿಧಿಗಳನ್ನು

ಮಾಡಿ ಕಣ್ವಮಠದ ಉಪಾಸ್ಯದೇವರಾದ ಶ್ರೀ ವಿಠ್ಠಲಕೃಷ್ಣ ದೇವರ ಪೂಜಾ, ಅರ್ಚನೆಗಳನ್ನು ಮಾಡುತ್ತಲೂ ಜನರಲ್ಲಿ ವಿಷ್ಣುಭಕ್ತಿಯನ್ನೂ, ಶ್ರೀ ನಾರಾಯಣೋಪಾಸನೆಯನ್ನೂ ಬೆಳೆಸುತ್ತಾ ಹೋದರು. ಸಂಚಾರದಲ್ಲಿ ತಮ್ಮ ವಿದ್ವತ್ಪೂರ್ಣ ಪ್ರಾಸಾದಿಕ ವಾಣಿಯಿಂದ ಶಿಷ್ಯರಿಗೆ ಪಾಠ, ಪ್ರವಚನ ಮಾಡುತ್ತ ಶುಕ್ಲ ಯಜುರ್ವೇದದ ತತ್ವರಹಸ್ಯಗಳನ್ನು ಬೋಧಿಸಿದರು. ಅವರ ಬೊಧನೆಯಲ್ಲಿ ವೇದಾಂತ ತತ್ವ ರಹಸ್ಯಗಳೆಲ್ಲ ತಿಳಿ ತಿಳಿಯಾಗಿ ತಿಳಿವಿನ ತೆರೆ ತೊರೆಯಾಗಿ ಹರಿದು ಬರುತ್ತಿದ್ದವು. ಅವರ ನುಡಿಮುತ್ತುಗಳಲ್ಲಿ ಭಗವದ್ಭಕ್ತಿ, ತತ್ವಜ್ಞಾನಗಳೆರಡೂ ಹಾಸುಹೊಕ್ಕಾಗಿ ಬೆರೆತು ಶ್ರೋತೃಗಳೆಲ್ಲಾ ಆನಂದತುಂದಿಲರಾಗುತ್ತಿದ್ದರು. ಹೀಗೆ ತಮ್ಮ ಪ್ರಯಾಣವನ್ನು ಧರ್ಮಪ್ರಚಾರ ಮಾಡುತ್ತ ತುಂಗಭದ್ರಾ ತೀರ, ಬೆಂಗಳೂರು, ಕೋಲಾರ, ಚಿಂತಾಮಣಿ, ಮುಳಬಾಗಿಲು, ಅರಸಿಕೆರೆ, ಚಿಕ್ಕಬಳ್ಳಾಪುರ, ಬೆಳಗಾವಿ, ಧಾರವಾಡ, ಗದಗ, ರೋಣ, ದಕ್ಕಲಿ, ವಿಜಯಪುರ ಕಡೆಗೆ ಬೆಳೆಸಿದರು. ಮಾರ್ಗ ಮಧ್ಯದಲ್ಲಿ ಆದವಾನಿ, ಅನಂತಪುರ ಗಳಲ್ಲಿ ವಾಸ್ತವ್ಯ ಮಾಡುತ್ತ ನಡೆದರು.

ಕಣ್ವಮಠದ ಪೀಠಾಧಿಪತಿಗಳಾದ ಶ್ರೀ ಮಾಧವತೀರ್ಥರ ದರ್ಶನ ಪಡೆಯಲು ಸಮಸ್ತ ಕಣ್ವಶಾಖೆಯ ದ್ವೈತ ಮತ್ತು ಶೈವಸಂಪ್ರದಾಯದವರೆಲ್ಲರೂ ಬಂದು ತಮ್ಮ ಸೇವೆ ಸಲ್ಲಿಸಿ ಶ್ರೀಗಳ ಆಶೀರ್ವಾದ ಪಡೆಯುತ್ತಿದ್ದರು. ಸ್ಮಾರ್ಥ, ವೈಷ್ಣವ, ಮಾಧ್ವರೆಂಬ ತಾರತಮ್ಯ ತೋರದೇ ಶುಕ್ಲ ಯಜುರ್ವೇದದ ವಿದ್ವಾಂಸರಿಗೆ ಮಾನಸನ್ಮಾನ ಮಾಡುತ್ತಿದ್ದರು. ಹೀಗೆಯೇ ಶ್ರೀಪಾದಂಗಳವರು ದೀರ್ಘ ಸಂಚಾರ ಮುಗಿಸಿ ಮರಳಿ ವೀರಘಟ್ಟಕ್ಕೆ ಬಂದ ಮೇಲೆ ಒಂದು ವರ್ಷ ವಿಜಯಯಾತ್ರೆಗೈಯದಿರಲು ನಿರ್ಧರಿಸಿ ಈ ಅವಧಿಯಲ್ಲಿ ಅಧ್ಯಯನ, ಅಧ್ಯಾಪನ, ತಪಸ್ಸು ಮತ್ತು ಭಕ್ತರ ಸಮಸ್ಯೆಗಳಿಗೆ ಉಪಾಯ ಸೂಚಿಸುವುದು ಇವುಗಳನ್ನೇ ತಮ್ಮ ಕಾರ್ಯಕ್ರಮಗಳನ್ನಾಗಿಸಿಕೊಂಡರು.

ಶ್ರೀಮನ್ಮಾಧವತೀರ್ಥರು ಒಟ್ಟಾರೆ ಮೂವರು ಮಹನೀಯರಿಗೆ ಯತ್ಯಾಶ್ರಮವನ್ನು ಕೊಟ್ಟಿರುವರೆಂದು ತಿಳಿದುಬರುತ್ತದೆ. ಇವರಲ್ಲಿ ಶ್ರೀ ವಾಮನತೀರ್ಥರು (ಇವರು ಶ್ರೀ ಮಾಧವತೀರ್ಥರ ಪೂರ್ವಾಶ್ರಮದಲ್ಲಿ ವಿದ್ಯಾಗುರುಗಳಾಗಿದ್ದ ವೇದಶಾಸ್ತ್ರ ಸಂಪನ್ನರಾದ ಆದವಾನಿಯ ಶ್ರೀ ಧರ್ಮಭಟ್ಟರು ) ಮತ್ತು ವಿಷ್ಣುಪ್ರೀಯತೀರ್ಥರು ಎಂಬ ಇಬ್ಬರು ಸ್ವಇಚ್ಛೆಯಿಂದ ಮೋಕ್ಷಾರ್ಥಿಯಾಗಿ ಸಂನ್ಯಾಸ ಸ್ವೀಕರಿಸಿದರು (ಬಿಡಿ ಸಂನ್ಯಾಸಿಗಳು). ಮೂರನೆಯವರಾದ ಶ್ರೀ ಅಕ್ಷೋಭ್ಯತೀರ್ಥರೆಂಬುವರು ಶ್ರೀ ಮಾಧವತೀರ್ಥರ ತರುವಾಯ ಕಣ್ವಮಠದ ಪೀಠವನ್ನಲಂಕರಿಸಿದ ಯತಿವರ್ಯರು.

ಹೀಗೆಯೇ ದಿನಗಳು ಕಳೆದಂತೆ ಶ್ರೀ ಮಾಧವತೀರ್ಥರ ಆರೋಗ್ಯವು ವಿಷಮಿಸಿತು. ವೃಂದಾವನಸ್ಥರಾಗುವ ಕಾಲ ಪ್ರಾಪ್ತವಾಯಿತೆಂದು ತಮ್ಮ ದೃಷ್ಟಿಯಿಂದ ತಿಳಿದುಕೊಂಡವರಾಗಿ ತಮ್ಮ ಪ್ರಯಾಣವನ್ನು ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಬುದ್ದಿನ್ನಿ ಗ್ರಾಮದ ಕಡೆಗೆ ಬೆಳೆಸಿದರು. ಬುದ್ದಿನ್ನಿಗೆ ಆಗಮಿಸಿದ ನಂತರ ಶ್ರೀಗಳು ಶಿಷ್ಯ ಮಂಡಲಿಯನ್ನು ಕರೆದು ಭಗವತ್ಪ್ರೇರಣಾನುಸಾರವಾಗಿ ನಾವು ಬುದ್ದಿನ್ನಿಯಲ್ಲಿಯೇ ವೃಂದಾವನಸ್ಥರಾಗುವದಾಗಿ ಸಂಕಲ್ಪಿಸಿರುವೆವು. ಅಲ್ಲಿಯ ತನಕ ಶ್ರೀ ವಿಠ್ಠಲಕೃಷ್ಣದೇವರ ಪೂಜೆ ಇಲ್ಲಿಯೇ ನಡೆಯಬೇಕೆಂದು ಅಪ್ಪಣೆ ಮಾಡಿದರು. ಹೀಗೆಯೇ ದಿನಗಳು ಕಳೆದಂತೆ ಮಠಕ್ಕೆ ಒಬ್ಬ ಶಿಷ್ಯರನ್ನು ಸ್ವೀಕರಿಸುವ ಕಾಲವು ಕ್ರಮಪ್ರಾಪ್ತವಾಗಿ ಬರಲು ಶಾ. ಶಕೆ 1732 (ಕ್ರಿ. ಶ. 1810) ಶುಕ್ಲ ನಾಮ ಸಂವತ್ಸರ ಚೈತ್ರ ಶುದ್ಧ ತೃತಿಯಾ ದಿವಸ ಶ್ರೀ ಅಕ್ಷೋಭ್ಯತೀರ್ಥರಿಗೆ ಸಂನ್ಯಾಸ ದೀಕ್ಷೆಯನ್ನಿತ್ತು ಮಠದ ಪೀಠವನ್ನು ವಹಿಸಿಕೊಟ್ಟರು. ಅನಂತರ ದುಃಖಿತಪ್ತರಾಗಿದ್ದ ಶಿಷ್ಯವೃಂದವನ್ನು ಸಾಂತ್ವನಗೊಳಿಸಿದರು. ಮರುದಿವಸ ಅಂದರೆ ಶಾ. ಶ. 1732 (ಕ್ರಿ. ಶ. 1810) ಶುಕ್ಲನಾಮ ಸಂವತ್ಸರ ಚೈತ್ರ ಶುದ್ಧ ಚತುರ್ಥಿಯ ಪುಣ್ಯ ದಿವಸ ಶ್ರೀ ಮಾಧವತೀರ್ಥರು ಹರಿಪಾದವನ್ನು ಸೇರಿದರು. ಇವರ ವೃಂದಾವನವು ಮೇಲೆ ಹೇಳಿದಂತೆ ಬುದ್ದಿನ್ನಿಯಲ್ಲಿ ಇದ್ದು ನಿತ್ಯವೂ ಧಾರ್ಮಿಕ ವಿಧಿವಿಧಾನದಿಂದ ಪೂಜೆ, ಅನ್ನಸಂತರ್ಪಣೆ ನಡೆಯುತ್ತಿದೆ ಹಾಗೂ ಪ್ರತಿವರ್ಷವೂ ಆರಾಧನಾ ಮಹೋತ್ಸವವು ಬಹು ವಿಜೃಂಭಣೆಯಿಂದ ಜರುಗುವುದು.

ಶ್ರೀ ಮಾಧವತೀರ್ಥರು ವೃಂದಾವನಸ್ಥರಾಗುವವರೆಗೆ ವೀರಘಟ್ಟದಲ್ಲಿಯೇ ಕಠೋರ ತಪಸ್ಸನ್ನಾಚರಿಸಿದರು. ಬಳಿಕ ಅವರ ಕರ ಸಂಜಾತರಾದ ಶ್ರೀ ಅಕ್ಷೋಭ್ಯತೀರ್ಥರೂ ಅಲ್ಲಿಯೇ ತಪಸ್ಸನ್ನಾಚರಿಸಿದರು. ಮುಂದೆ ಶ್ರೀ ಅಕ್ಷೋಭ್ಯತೀರ್ಥರ ಕರ ಸಂಜಾತರಾದ **ಶ್ರೀ ವಿದ್ಯಾಧೀಶತೀರ್ಥರ (ಮೂರನೇ ಪೀಠಾಧಿಪತಿಗಳು) ಅಧಿಕಾರ ಅವಧಿಯಲ್ಲಿ ಸುರಪುರದ ದೊರೆಗಳಿಂದ ಹುಣಸಿಹೊಳೆ ಗ್ರಾಮವನ್ನು ಜಹಾಗೀರ ಆಗಿ ಪಡೆದ ನಂತರ, ಶ್ರೀ ಕಣ್ವಮಠವು ಹುಣಸಿಹೊಳೆಗೆ ಸ್ಥಳಾಂತರಗೊಂಡಿತು.** ಇನ್ನೊಂದು ಮಹತ್ವದ ಘಟನೆಯೆಂದರೆ, ಶ್ರೀ ವಿದ್ಯಾಧೀಶತೀರ್ಥರ ಆಪ್ತಶಿಷ್ಯರಾದ ಪೂಜ್ಯಭೀಮಾಚಾರ್ಯರು, ಸ್ವಇಚ್ಛೆಯಿಂದ ಮೋಕ್ಷಾರ್ಥಿಯಾಗಿ ಸಂನ್ಯಾಸಾಶ್ರಮವನ್ನು ಅಪೇಕ್ಷಿಸಲು, ಅವರಿಗೆ ಶ್ರೀ ವಿದ್ಯಾಧೀಶತೀರ್ಥರು ಶ್ರೀ ಕೃಷ್ಣದ್ವೈಪಾಯನತೀರ್ಥರೆಂಬ ನಾಮಾಭಿಧಾನದಿಂದ ಸಂನ್ಯಾಸಾಶ್ರಮವನ್ನಿತ್ತು ಅನುಗ್ರಹಿಸಿದರು. ಶ್ರೀ ವಿದ್ಯಾಧೀಶತೀರ್ಥರ ತದನಂತರ ಕಣ್ವಮಠದ ಪೀಠಾಧಿಪತಿಗಳಾದ ಶ್ರೀ ವಿದ್ಯಾನಿಧಿತೀರ್ಥರು, ಶ್ರೀ ವಿದ್ಯಾಸಂಪೂರ್ಣತೀರ್ಥರು, ಶ್ರೀ ವಿದ್ಯಾಧಿರಾಜತೀರ್ಥರು, ಶ್ರೀ ವಿದ್ಯಾವಿರಾಜತೀರ್ಥರು, ಶ್ರೀ ವಿದ್ಯಾನಿಲಯ ತೀರ್ಥರು, ಶ್ರೀ ವಿದ್ಯಾಮನೋಹರ ತೀರ್ಥರು, ಶ್ರೀ ವಿದ್ಯಾತಪೋನಿಧಿತೀರ್ಥರು, ಶ್ರೀ ವಿದ್ಯಾಭೂಷಣತೀರ್ಥರು, ಶ್ರೀ ವಿದ್ಯಾಭಾಸ್ಕರತೀರ್ಥರು (12 ನೇ ಪೀಠಾಧಿಪತಿಗಳು) ಹುಣಸಿಹೊಳೆ ಕ್ಷೇತ್ರವನ್ನೇ ಕಣ್ವಮಠದ ಕೇಂದ್ರಬಿಂದುವನ್ನಾಗಿಟ್ಟುಕೊಂಡು, ಭಾರತದಾದ್ಯಂತ ಶುಕ್ಲಯಜುರ್ವೇದೀಯರ, ಇನ್ನೂ ವಿಶೇಷವಾಗಿ ಸಮಸ್ತ ಕಣ್ವಶಾಖೀಯರ ಧರ್ಮಾಭಿವೃಧ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರಚಾರ ಮಾಡುತ್ತಾ ಬಂದಿದ್ದಾರೆ.

ಹನ್ನೆರಡನೇ ಯತಿಗಳಾದ ಶ್ರೀ ವಿದ್ಯಾಭಾಸ್ಕರತೀರ್ಥರು, ಸತತ 22 ವರ್ಷಗಳ ಕಾಲ ಶ್ರೀ ವಿಠ್ಠಲಕೃಷ್ಣನ ಪೂಜೆಗೈದು, ಸಮಸ್ತ ಕಣ್ವಶಾಖೀಯರಲ್ಲಿ ಆತ್ಮಾಭಿಮಾನದ ಜ್ಯೋತಿಯನ್ನು ಬೆಳಗಿಸಿ ಶ್ರೀ ವಿದ್ಯಾವಾರಿಧಿತೀರ್ಥರಿಗೆ ಸಂನ್ಯಾಸ ದೀಕ್ಷೆಯನ್ನಿತ್ತು ಮಠದ ಪೀಠವನ್ನು ವಹಿಸಿಕೊಟ್ಟರು. ಆದರೆ ಶ್ರೀ ವಿದ್ಯಾವಾರಿಧಿತೀರ್ಥರು ಕಾರಣಾಂತರಗಳಿಂದ ಪೀಠತ್ಯಾಗ ಮಾಡಿದರು. ನಂತರ ಬೆಂಗಳೂರಿನ ಶ್ರೀ ರವೀಂದ್ರಾಚಾರ್ಯ ಇವರು ಆಶ್ವೀಜ ಮಾಸ ಕೃಷ್ಣಪಕ್ಷ ಪಂಚಮಿ (ಕ್ರಿ. ಶ. 18-10-2019) ರಂದು " ಶ್ರೀ ವಿದ್ಯಾಕಣ್ವವಿರಾಜತೀರ್ಥ" ಎಂಬ ನಾಮದಿಂದ ಶ್ರೀ ಕಣ್ವಮಠದ ಪೀಠಾರೋಹಣ ಮಾಡಿದರು.

**ಕಣ್ವಮಠ ಹುಣಸಿಹೊಳೆ ಕ್ಷೇತ್ರ ಮತ್ತು ಮಠದ ಇತರ ಕ್ಷೇತ್ರಗಳ ಸಂಕ್ಷಿಪ್ತ ಪರಿಚಯ:-** ಶ್ರೀಮತ್ ಕಣ್ವಮಠ ಹುಣಸಿಹೊಳೆಯಲ್ಲಿ ಶ್ರೀ ಗೋಪಾಲಕೃಷ್ಣನ ವಿಗ್ರಹ, ಶ್ರೀ ಪ್ರಾಣದೇವರ ವಿಗ್ರಹ, ಶ್ರೀ ಯಾಜ್ಞವಲ್ಕ್ಯರ ವಿಗ್ರಹ, ಕಣ್ವಮಠ ಸ್ಥಾಪಕರಾದ ಶ್ರೀ ಮಾಧವ ತೀರ್ಥರ ಮೃತ್ತಿಕಾ ವೃಂದಾವನ ಸ್ಥಾಪನೆಯಾದ ದಿನದಿಂದ, ಎಲ್ಲಾ ವಿಗ್ರಹಗಳ ಪೂಜೆ, ಸಂಸ್ಥಾನ ಪೂಜೆ, ಶ್ರೀಚಕ್ರಾಂಕಿತ ಕಾಶಿ ವಿಶ್ವನಾಥ ಸ್ಫಟಿಕಲಿಂಗ ಪೂಜೆ, ಇತರ 6 ಯತಿಗಳ ಬೃಂದಾವನ ಪೂಜೆ ಪ್ರತಿನಿತ್ಯ ವಿಧಿವತ್ತಾಗಿ ಭಕ್ತಿಪೂರ್ವಕವಾಗಿ ವಿಜೃಂಭಣೆಯಿಂದ ನಡೆಯುತ್ತಿದೆ. ಮಠದಲ್ಲಿ, ಬಂದ ಭಕ್ತರಿಗೆಲ್ಲಾ ಪ್ರತಿನಿತ್ಯ ವಸತಿ ವ್ಯವಸ್ಥೆ, ಅನ್ನಸಂತರ್ಪಣೆ ವ್ಯವಸ್ಥೆ ಇರುತ್ತದೆ. ಮಠಕ್ಕೆ ಬಂದ ಭಕ್ತರೆಲ್ಲ "ಕಣ್ವತೀರ್ಥ" ಪುಷ್ಕರಣಿಯಲ್ಲಿ ಮಿಂದು ಪಾವನರಾಗುತ್ತಾರೆ.

ಕಣ್ವಮಠದ 6 ಪೀಠಾಧಿಪತಿಗಳ ಮತ್ತು 3 ಮೋಕ್ಷಾಪೇಕ್ಷಿ ಯತಿಗಳ ವೃಂದಾವನಗಳು ವಿವಿಧ ಕ್ಷೇತ್ರಗಳಲ್ಲಿವೆ. (1) ಲಿಂಗಸೂಗೂರು ತಾಲೂಕಿನ ಬುದ್ದಿನ್ನಿಯಲ್ಲಿ ಶ್ರೀ ಮಾಧವ ತೀರ್ಥರ ವೃಂದಾವನ (2) ಮುದ್ದೇಬಿಹಾಳ ತಾಲೂಕಿನ ಬಿಳೆಭಾವಿಯಲ್ಲಿ ಶ್ರೀ ಅಕ್ಷೋಭ್ಯತೀರ್ಥರ ಹಾಗೂ ಶ್ರೀ ವಿದ್ಯಾನಿಧಿತೀರ್ಥರ ವೃಂದಾವನಗಳು (3) ಸಿಂಧನೂರು ತಾಲೂಕಿನ ಗೊರಲೂಟಿಯಲ್ಲಿ ಶ್ರೀ ವಿದ್ಯಾಸಂಪೂರ್ಣತೀರ್ಥರ ವೃಂದಾವನ (4) ಹೊಸಪೇಟೆಯ ತಾಲೂಕಿನ ಕಮಲಾಪುರದಲ್ಲಿ ಶ್ರೀ ವಿದ್ಯಾವಿರಾಜತೀರ್ಥರ ವೃಂದಾವನ (5) ಬೆಂಗಳೂರು ಜಿಲ್ಲೆಯ ಬಿದರಹಳ್ಳಿಯಲ್ಲಿ ಶ್ರೀ ವಿದ್ಯಾಭೂಷಣತೀರ್ಥರ ವೃಂದಾವನ (6) ಆಂದ್ರಪ್ರದೇಶದ ಆದವಾನಿಯಲ್ಲಿ ಶ್ರೀ ವಾಮನ ತೀರ್ಥರ ವೃಂದಾವನ (7) ಸುರಪುರ ತಾಲೂಕಿನ ಸೂಗೂರಲ್ಲಿ ಶ್ರೀ ವೀಷ್ಣುಪ್ರಿಯತೀರ್ಥರ ವೃಂದಾವನ (8) ಸುರಪುರದಲ್ಲಿ ಶ್ರೀ ಕೃಷ್ಣದ್ವೈಪಾಯನತೀರ್ಥರ ವೃಂದಾವನ. ಇವೆಲ್ಲ ಕ್ಷೇತ್ರಗಳಲ್ಲಿ ಅಲ್ಲಿಯ

ಸುತ್ತಮುತ್ತಲಿನ ಭಕ್ತಾದಿಗಳ ಸಹಕಾರದಿಂದ ನಿತ್ಯ ವೃಂದಾವನ ಪೂಜೆ ಹಾಗೂ ಮೇಲಿಂದ ಮೇಲೆ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿದ್ದು ಇವೆಲ್ಲ ಕ್ಷೇತ್ರಗಳು ಶುಕ್ಲಯಜುರ್ವೇದಿಯರ ಪವಿತ್ರ ಧಾರ್ಮಿಕ ಕ್ಷೇತ್ರಗಳಾಗಿದ್ದು, ಶುಕ್ಲಯಜುರ್ವೇದದ ತತ್ವಪ್ರಚಾರ ಸಾಂಗವಾಗಿ ನಡೆಯುತ್ತಿದೆ. ಕಣ್ವಮಠದ ಇನ್ನೊಂದು ಕ್ಷೇತ್ರವಾದ ಶ್ರೀ ಮಾಧವತೀರ್ಥರ ತಪೋಭೂಮಿ "ವೀರಘಟ್ಟವು", ಕೃಷ್ಣಾನದಿ ತೀರದ ಪ್ರಶಾಂತ ಸ್ಥಳದಲ್ಲಿದೆ. ಇಲ್ಲಿ ಭಕ್ತಾದಿಗಳಿಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಲು ಅನುಕೂಲ ಮಾಡಲಾಗಿದೆ ಹಾಗೂ ಭಕ್ತಾದಿಗಳು ಇದರ ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಕಣ್ವಮಠದ ಇನ್ನೊಂದು ಮಹತ್ವದ ಧರ್ಮಕ್ಷೇತ್ರವೆಂದರೆ ಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಇರುವ "ಕಣ್ವಮಠ ಯಲಹಂಕ ಶಾಖಾಮಠ". ಈ ಕ್ಷೇತ್ರದಲ್ಲಿ ಮೇಲಿಂದ ಮೇಲೆ ಸಾಕಷ್ಟು ಕಾರ್ಯಕ್ರಮಗಳನ್ನು ವಿಜ್ರುಂಭಣೆಯಿಂದ ಆಚರಿಸಲಾಗುತ್ತಿದೆ. ಮುಖ್ಯಪ್ರಾಣ ದೇವರ ನಿತ್ಯ ಪೂಜೆ ಹಾಗೂ ಹನುಮಜಯಂತಿ ಉತ್ಸವವು ವಿಶೇಷವಾಗಿರುತ್ತದೆ.

ಕಣ್ವಮಠದ ಬಹುತೇಕ ಯತಿವರೇಯ್ಯರು ತಮ್ಮ ಧರ್ಮ ಪ್ರಚಾರವನ್ನು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತಗೊಳಿಸದೆ ಆಂದ್ರಪ್ರದೇಶ, ಗುಜರಾತ್, ಮಹಾರಾಷ್ಟ್ರ ಮತ್ತು ಉತ್ತರ ಭಾರತದ ಅನೇಕ ಪ್ರಾಂತಗಳಲ್ಲಿ ಧರ್ಮಪ್ರಚಾರ ಮಾಡುತ್ತಲೇ ಬಂದಿದ್ದಾರೆ ಹಾಗೂ ಬೇರೆ ರಾಜ್ಯಗಳ ಅನೇಕ ಭಕ್ತಾದಿಗಳು ಶ್ರೀ ಕಣ್ವಮಠ ಹುಣಸಿಹೊಳೆಗೆ ಬಂದು ತಮ್ಮ ಸೇವೆ ಸಲ್ಲಿಸಿ ಕಣ್ವಮಠದ ಉಪಾಶ್ಯದೇವರಾದ ಶ್ರೀ ವಿಠ್ಠಲಕೃಷ್ಣನ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದಾರೆ ಹಾಗೂ ಶ್ರೀಗಳ ಆಶೀರ್ವಾದ ಪಡೆಯುತ್ತಿದ್ದಾರೆ.

**************************************

# ಕಣ್ವಮಠದ ಯತಿಗಳ ಪರಂಪರೆ

| **ಕಣ್ವಮಠದ ಪೀಠಾಧಿಪತಿಗಳು** | **ಪೀಠಾಧಿಪತಿಗಳ ಹೆಸರು** | **ಯತಿಗಳ ಬೃಂದಾವನ ಸ್ಥಳ** | **ಆರಾಧನಾ ದಿನ** | **ಯತಿಗಳ ಅವಧಿ** |
|---|---|---|---|---|
| ಮೊದಲನೇಯವರು | ಶ್ರೀ ಮಾಧವತೀರ್ಥರು | ಬುದ್ದಿನ್ನಿ, ತಾ:ಲಿಂಗಸೂಗೂರು | ಚೈತ್ರ ಶುಕ್ಲ ಚತುರ್ಥಿ | 1796-1810 |
| ಎರಡನೇಯವರು | ಶ್ರೀ ಅಕ್ಷೋಭ್ಯತೀರ್ಥರು | ಬಿಳೇಭಾವಿ, ತಾ: ಮುದ್ದೇಬಿಹಾಳ | ಭಾದ್ರಪದ ಕೃಷ್ಣ ಚತುರ್ದಶಿ | 1809-1811 |
| ಮೂರನೇಯವರು | ಶ್ರೀ ವಿದ್ಯಾಧೀಶತೀರ್ಥರು | ಹುಣಸಿಹೊಳೆ, ತಾ:ಸುರಪುರ | ಆಷಾಢ ಕೃಷ್ಣ ಬಿದಿಗೆ | 1811-1848 |
| ನಾಲ್ಕನೇಯವರು | ಶ್ರೀ ವಿದ್ಯಾನಿಧಿತೀರ್ಥರು | ಬಿಳೇಭಾವಿ, ತಾ: ಮುದ್ದೇಬಿಹಾಳ | ಫಾಲ್ಗುಣ ಕೃಷ್ಣ ಷಷ್ಠಿ | 1848-1866 |
| ಐದನೇಯವರು | ಶ್ರೀ ವಿದ್ಯಾಸಂಪೂರ್ಣತೀರ್ಥರು | ಗೊರಲೂಟಿ, ತಾ:ಸಿಂಧನೂರು | ಭಾದ್ರಪದ ಶುಕ್ಲ ಏಕಾದಶಿ | 1866-1888 |
| ಆರನೇಯವರು | ಶ್ರೀ ವಿದ್ಯಾಧಿರಾಜತೀರ್ಥರು | ಹುಣಸಿಹೊಳೆ, ತಾ:ಸುರಪುರ | ಆಶ್ವೀಜ ಕೃಷ್ಣ ಅಮಾವಾಸ್ಯೆ | 1888-1919 |
| ಏಳನೇಯವರು | ಶ್ರೀ ವಿದ್ಯಾವಿರಾಜ ತೀರ್ಥರು | ಕಮಲಾಪುರ, ತಾ: ಹೊಸಪೇಟೆ | ಭಾದ್ರಪದ ಶುಕ್ಲ ಏಕಾದಶಿ | 1919-1947 |
| ಎಂಟನೇಯವರು | ಶ್ರೀ ವಿದ್ಯಾವಿಜಯತೀರ್ಥರು | ಹುಣಸಿಹೊಳೆ, ತಾ:ಸುರಪುರ | ಚೈತ್ರ ಶುಕ್ಲ ಪಂಚಮಿ | 1935-1942 |

| | | | | |
|---|---|---|---|---|
| ಒಂಭತ್ತನೇಯವರು | ಶ್ರೀ ವಿದ್ಯಾ ಮನೋಹರತೀರ್ಥರು | ಹುಣಸಿಹೊಳೆ, ತಾ:ಸುರಪುರ | ಜೇಷ್ಠ ಕೃಷ್ಣ ಷಷ್ಟಿ | 1947-1968 |
| ಹತ್ತನೇಯವರು | ಶ್ರೀ ವಿದ್ಯಾತಪೋನಿಧಿತೀರ್ಥರು | ಹುಣಸಿಹೊಳೆ, ತಾ:ಸುರಪುರ | ಜೇಷ್ಠ ಕೃಷ್ಣ ಬಿದಿಗೆ | 1967-1988 |
| ಹನ್ನೊಂದನೇಯವರು | ಶ್ರೀ ವಿದ್ಯಾಭೂಷಣತೀರ್ಥರು | ಬಿದರಹಳ್ಳಿ, ಬೆಂಗಳೂರು | ಶ್ರಾವಣ ಕೃಷ್ಣ ಪಂಚಮಿ | 1988-1993 |
| ಹನ್ನೆರಡನೇಯವರು | ಶ್ರೀ ವಿದ್ಯಾಭಾಸ್ಕರತೀರ್ಥರು | ಹುಣಸಿಹೊಳೆ, ತಾ:ಸುರಪುರ | ಜೇಷ್ಠ ಕೃಷ್ಣ ಏಕಾದಶಿ | 1993-2015 |
| **ಕೇವಲ ಮೋಕ್ಷಾಪೇಕ್ಷಿ ಯತಿಗಳು** | | | | |
| 1 | ಶ್ರೀ ವಾಮನತೀರ್ಥರು | ಆದವಾನಿ | ಆಷಾಢ ಶುಕ್ಲ ಪೂರ್ಣಿಮಾ | 1801-1807 |
| 2 | ಶ್ರೀ ವಿಷ್ಣುಪ್ರಿಯತೀರ್ಥರು | ಸೂಗೂರು, ತಾ:ಸುರಪುರ | ಕಾರ್ತೀಕ ಶುಕ್ಲ ಪಾಡ್ಯ | 1806-1816 |
| 3 | ಶ್ರೀ ಕೃಷ್ಣದ್ವೈಪಾಯನತೀರ್ಥರು | ಸುರಪುರ | ಫಾಲ್ಗುಣ ಶುಕ್ಲ ಪೂರ್ಣಿಮಾ | 1818-1833 |

–––***–––